**Akashvani : Bangalore**
**National Bulletin In Kannada**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**06.04.2024 / 19.35 hrs**

**ಮುಖ್ಯಾಂಶಗಳು**

೧. ಲೋಕಸಭಾ ಚುನಾವಣೆ; ಕಾವೇರುತ್ತಿರುವ ಪ್ರಚಾರ; ರಾಜಕೀಯ ಪಕ್ಷಗಳಿಂದ ಪರಸ್ಪರ ಟೀಕೆ-ವಾಗ್ದಾಳಿ

೨. ರಾಜ್ಯಸಭೆಯ ಐವರು ನೂತನ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

೩. ಕಝುಕಸ್ತಾನ್ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ; ಭಾರತದ ಅನುಪಮಾ ಉಪಾಧ್ಯಾಯ ಮತ್ತು ಎಂ.ತರುಣ್‌ಗೆ ಪ್ರಶಸ್ತಿ ಕಿರೀಟ.

೪. ಐಪಿಎಲ್ ಟಿ-೨೦ ಕ್ರಿಕೆಟ್; ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ತಾನ್ ರಾಯಲ್ಸ್ ತಂಡಗಳು ಮುಖಾಮುಖಿ

**<><*<><>*><>**

ಭಾರತದ ಪ್ರಜಾತಂತ್ರ, ಆರಂಭದಿಂದಲೂ ಸಾರ್ವತ್ರಿಕ ವಯಸ್ಕ ಮತದಾನಕ್ಕೆ ಹೆಸರಾಗಿದೆ. ಮತದಾನ ಪ್ರಕ್ರಿಯೆ ಭಾಗಿದಾರಿಯಲ್ಲಿ ಲಿಂಗಸಮಾನತೆಯ ಪಯಣ ವಿಶಿಷ್ಟವಾಗಿದೆ. ೧೯೫೨ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸುಮಾರು ೮೦ ಲಕ್ಷ ಮಹಿಳಾ ಮತದಾರರು ಇದ್ದರು. ಇವರಲ್ಲಿ ೨ ಲಕ್ಷ ೮೦ ಸಾವಿರ ಮತದಾರರಿಗೆ ಗುರುತಿನ ವಿವರ ಇರಲಿಲ್ಲ. ಇದು ಚುನಾವಣಾ ಆಯೋಗಕ್ಕೆ ಒಂದು ವಿಶಿಷ್ಟವಾದ ಸವಾಲಾಗಿತ್ತು. ಅನೇಕ ಮಹಿಳೆಯರು ಆಗಿನ ಸಂಪ್ರದಾಯದಂತೆ ತಮ್ಮ ಕುಟುಂಬದ ಪುರುಷ ಸದಸ್ಯರ ಹೆಸರಿನ ಅಡಿಯಲ್ಲಿ ತಮ್ಮ ಹೆಸರನ್ನು ನೊಂದಾವಣೆ ಮಾಡಿಸಿದ್ದರು ಆದರೆ ಈಗ ಚಿತ್ರಣ ಬದಲಾಗಿದೆ. ೨೦೧೯ ರ ಲೋಕಸಭಾ ಚುನಾವಣೆಯಲ್ಲಿ ಶೇಕಡ ೬೭.೧೮ ರಷ್ಟು ದಾಖಲೆಯ ಸಂಖ್ಯೆ ಮಹಿಳೆಯರು ಮತದಾನ ಮಾಡಿದ್ದಾರೆ. ಚುನಾವಣಾ ಆಯೋಗ, ಚುನಾವಣೆಯಲ್ಲಿ ಎಲ್ಲ ಮತದಾರರ ಪಾಲ್ಗೊಳ್ಳುವಿಕೆ ಖಾತರಿಪಡಿಸಲು ವ್ಯಾಪಕ ಕ್ರಮಕೈಗೊಂಡ ಕಾರಣ ಇದು ಸಾಧ್ಯವಾಗಿದೆ. ಬುಡಕಟ್ಟು ಜಿಲ್ಲೆಗಳಲ್ಲಿ ಮಹಿಳಾ ಮತದಾರರ ರ‍್ಯಾಲಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಮದರ್ ಇಂಡಿಯಾ ಮೊದಲಾದ ಕಾರ್ಯಕ್ರಮಗಳ ಮೂಲಕ ಮಹಿಳಾ ಮತದಾರರಿಗೆ ಶಿಕ್ಷಣ ನೀಡಲಾಗಿದೆ. ೨೦೨೪ ಲೋಕಸಾಭಾ ಚುನಾವಣೆ ಭಾರತದ ಪ್ರಜಾತಂತ್ರ ಇತಿಹಾಸದಲ್ಲಿ ಅತಿ ಪ್ರಮುಖವಾದ ಘಟ್ಟವಾಗಿದೆ. ೪೭ ಕೋಟಿ ೧ ಲಕ್ಷ ಮಹಿಳಾ ಮತದಾರರು ಮತದಾನಕ್ಕೆ ಹೆಸರು ನೊಂದಾಯಿಸಿಕೊಂಡಿದ್ದಾರೆ ಎಂದು ನಮ್ಮ ಪ್ರತಿನಿಧಿ ವರದಿ ಮಾಡಿದ್ದಾರೆ.

**<><*<><>*><>**

ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಸನ್ನಿಹಿತವಾಗುತ್ತಿದ್ದಂತೆಯೇ ವಿವಿಧ ರಾಜಕೀಯ ಪಕ್ಷಗಳು ಚುನಾವಣಾ ರ‍್ಯಾಲಿ ನಡೆಸಿವೆ.

**<><*<><>*><>**

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸುಳ್ಳಿನ ಕಂತೆಯಾಗಿದೆ ಎಂದು ಪ್ರಧಾನಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ನರೇಂದ್ರ ಮೋದಿ ಹೇಳಿದ್ದಾರೆ. ಅವರು, ರಾಜಸ್ಥಾನದ ಪುಷ್ಕರ್‌ನಲ್ಲಿಂದು ಚುನಾವಣಾ ಸಭೆಯನ್ನುದ್ದೇಶಿಸಿ ಮಾತನಾಡಿ, ಕಾಂಗ್ರೆಸ್‌ಗೆ ನೀತಿ ತತ್ವಗಳು ಉಳಿದಿಲ್ಲ. ಅದು ಪ್ರತಿಯೊಂದನ್ನು ಗುತ್ತಿಗೆಗೆ ನೀಡಿದಂತಿದೆ. ಇಂತಹ ಪಕ್ಷ ದೇಶದ ಹಿತಾಸಕ್ತಿಗಾಗಿ ಯಾವುದೇ ಕೆಲಸ ಮಾಡಲಾಗದು ಎಂದು ಟೀಕಿಸಿದರು. ಬಿಜೆಪಿ ನವ ಭಾರತ ನಿರ್ಮಾಣಕ್ಕೆ ಬದ್ಧವಾಗಿದೆ. ತಮ್ಮ ಪಕ್ಷ ಮೂರನೇ ಅವಧಿಗೆ ಅಧಿಕಾರಕ್ಕೆ ಬರುವುದು ಬಹು ದೂರವಿಲ್ಲ. ಬಿಜೆಪಿ ಸರ್ಕಾರ ಅಧಿಕಾರ ಬಂದ ಮೊದಲ ನೂರು ದಿನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ದೊಡ್ಡ ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂದು ಹೇಳಿದರು. ಸಂತೋಷ, ಗೌರವ, ಭದ್ರತೆ ಮತ್ತು ಮಹಿಳಾ ಶಕ್ತಿಯ ಸಮೃದ್ಧಿ ಇವು ತಮ್ಮ ಗ್ಯಾರಂಟಿಗಳಲ್ಲಿ ಸೇರಿವೆ ಎಂದು ನರೇಂದ್ರ ಮೋದಿ ಹೇಳಿದರು. ತಮ್ಮ ಪಕ್ಷ ೨೦೧೪ರಲ್ಲಿ ಅಧಿಕ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಸರ್ಕಾರ ನಡೆಸಿದೆ. ಸಮುದ್ರದ ಮೇಲೆ ಸೇತುವೆ ನಿರ್ಮಿಸಲಾಗಿದೆ. ಗಡಿಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ ಎಂದು ನರೇಂದ್ರ ಮೋದಿ ಅವರು ಹೇಳಿದರು. ಇದಕ್ಕೂ ಮುನ್ನ ಸಹರನ್‌ಪುರ್‌ದಲ್ಲಿ ಚುನಾವಣಾ ರ‍್ಯಾಲಿ

ಉದ್ದೇಶಿಸಿ ಮಾತನಾಡಿದ ನರೇಂದ್ರ ಮೋದಿ ಅವರು, ಪ್ರಸ್ತುತ ಚುನಾವಣೆ ಸರ್ಕಾರ ರಚನೆಯ ಮಾರ್ಗವಲ್ಲದೇ, ದೇಶವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವ ಪಥವಾಗಿದೆ ಎಂದು ಹೇಳಿದರು.

<><*<><>*><>

ದೇಶದಲ್ಲಿ ಪ್ರಜಾತಂತ್ರ ಹಾಗೂ ಸಂವಿಧಾನವನ್ನು ಸಂರಕ್ಷಿಸಲು ಕಾಂಗ್ರೆಸ್ ಹೋರಾಟ ನಡೆಸುತ್ತಿದೆ ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಅವರು, ಜೈಪುರದಲ್ಲಿಂದು ಪಕ್ಷದ ಚುನಾವಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಕಾಂಗ್ರೆಸ್ ತನ್ನ ೫೫ ವರ್ಷಗಳ ಆಡಳಿತದಲ್ಲಿ ಅನೇಕ ಮೂಲಸೌಕರ್ಯಗಳನ್ನು ಹಾಗೂ ಐಐಟಿ, ಐಐಎಂ ಗಳಂತಹ ಸಂಸ್ಥೆಗಳನ್ನು ಹುಟ್ಟು ಹಾಕಿದೆ. ಕಾಂಗ್ರೆಸ್ ನಿರ್ಮಿಸಿದ ಹಳಿಗಳ ಮೇಲೆ ಈಗ ಬಿಜೆಪಿ ಪಕ್ಷ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸುತ್ತಿದೆ ಎಂದು ಟೀಕಿಸಿದರು. ಬಿಜೆಪಿ, ಕಾಂಗ್ರೆಸ್‌ನ ಗ್ಯಾರಂಟಿ ಶಬ್ದವನ್ನು ಬಳಸಿಕೊಂಡಿದೆ ಎಂದು ಆಪಾದಿಸಿದ ಅವರು, ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ೫೫ ವರ್ಷಗಳಲ್ಲಿ ಕಾಂಗ್ರೆಸ್ ಮಾಡಿದ ಕೆಲಸದ ವಿವರಗಳನ್ನು ನೀಡಲು ಕಾಂಗ್ರೆಸ್ ಸಿದ್ಧವಿದೆ ಎಂದು ಮಲ್ಲಿಕಾರ್ಜುನ್ ಖರ್ಗೆ ಹೇಳಿದರು. ಕಾಂಗ್ರೆಸ್‌ನ ಹಿರಿಯ ಧುರೀಣರಾದ ಸೋನಿಯಾ ಗಾಂಧಿ ಮಾತನಾಡಿ, ನಿರುದ್ಯೋಗ ಹಣದುಬ್ಬರ, ಆರ್ಥಿಕ ಬಿಕ್ಕಟ್ಟು ಮತ್ತು ಅಸಮಾನತೆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಪಕ್ಷ ಅಧಿಕಾರ ನಡೆಸಿದೆ. ದೇಶದ ಕೆಲವೇ ಜನರ ಸ್ವತ್ತಲ್ಲ, ಇದು ಎಲ್ಲರಿಗೂ ಸೇರಿದೆ ಎಂದರು. ಇದಕ್ಕೂ ಮುನ್ನ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮಾತನಾಡಿ, ಬಿಜೆಪಿ ಆಳ್ವಿಕೆಯಲ್ಲಿ ವಿರೋಧ ಪಕ್ಷಗಳು ಅತಿಕ್ರಮಣಕ್ಕೆ ಒಳಗಾಗಿವೆ ಎಂದು ಹೇಳಿದರು. ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಧುರೀಣರಾದ ಗೋವಿಂದ್ ಸಿಂಗ್, ಸಚಿನ್ ಪೈಲೆಟ್ ಮೊದಲಾದವರು ಕಾರ್ಯಕ್ರಮದಲ್ಲಿ ಮಾತನಾಡಿದರು.

<><*<><>*><>

ಮುಂಬರುವ ಲೋಕಸಭಾ ಚುನಾವಣೆಗಾಗಿ ಇಂದು ಕಾಂಗ್ರೆಸ್ ಆರು ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಉತ್ತರ ಗೋವಾ ಕ್ಷೇತ್ರದಿಂದ ರಮಾಕಾಂತ್ ಖಲಾಪ್, ದಕ್ಷಿಣ ಗೋವಾ ಕ್ಷೇತ್ರದಿಂದ ಕ್ಯಾಪ್ಟನ್ ವಿರಿಯಾಟೊ ಫರ್ನಾಂಡೀಸ್, ಮಧ್ಯಪ್ರದೇಶದ ಮೊರೆನಾ ಕಣದಿಂದ ಸತ್ಯಪಾಲ್ ಸಿಂಗ್ ಸಿಕರವಾರ್ ಹಾಗೂ ಗ್ವಾಲಿಯರ್‌ನಿಂದ ಪ್ರವೀಣ್ ಪಟಾಲ್ ಸ್ಪರ್ಧಿಸಲಿದ್ದಾರೆ.

<><*<><>*><>

ಲಕ್ಷದ್ವೀಪ ದೇಶದ ಅತಿ ಸಣ್ಣ ಮತಕ್ಷೇತ್ರ ಹೊಂದಿರುವ ಲೋಕಸಭಾ ಕ್ಷೇತ್ರವಾಗಿದೆ. ಬುಡಕಟ್ಟು ಜನಾಂಗದ ಮೀಸಲು ಕ್ಷೇತ್ರವಾದ ಈ ಮತಕ್ಷೇತ್ರದಲ್ಲಿ ಮೊದಲ ಹಂತದಲ್ಲಿ ಏಪ್ರಿಲ್ ೧೯ ರಂದು ಮತದಾನ ನಡೆಯಲಿದೆ. ಲಕ್ಷದ್ವೀಪ ಕ್ಷೇತ್ರದಲ್ಲಿ ಒಟ್ಟು ನಾಲ್ವರು ಅಭ್ಯರ್ಥಿಗಳ ಕಣದಲ್ಲಿದ್ದಾರೆ. ಪ್ರಸ್ತುತ ಲೋಕಸಭಾ ಸದಸ್ಯ ಹಾಗೂ ಎನ್‌ಸಿಪಿ ಶರತ್ ಪವಾರ್ ಪಕ್ಷದ ಅಭ್ಯರ್ಥಿ ಮೊಹಮ್ಮದ್ ಫೈಸಲ್, ಮಾಜಿ ಸಂಸದ ಹಾಗೂ ಕಾಂಗ್ರೆಸ್ ಪಕ್ಷದ ಅಮ್ದುಲಿಲ್ಲಾಹ್, ಬಿಜೆಪಿ ಬೆಂಬಲಿತ ಎನ್‌ಸಿಪಿ ಅಜಿತ್ ಪವಾರ್ ಪಕ್ಷದ ಅಭ್ಯರ್ಥಿ ಟಿ.ಪಿ.ಯೂಸುಫ್ ಹಾಗೂ ಸ್ವತಂತ್ರ ಅಭ್ಯರ್ಥಿ ಕೆ.ಕೊಯ ಕಣದಲ್ಲಿದ್ದಾರೆ. ಒಟ್ಟು ಹತ್ತು ದ್ವೀಪಗಳ ವ್ಯಾಪ್ತಿಯಲ್ಲಿ ಬರುವ ಈ ಮತಕ್ಷೇತ್ರದಲ್ಲಿ ೫೫ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ. ೫೭ ಸಾವಿರದ ೭೮೪ ಮತದಾರರಿದ್ದಾರೆ ಎಂದು ನಮ್ಮ ಪ್ರತಿನಿಧಿ ವರದಿ ಮಾಡಿದ್ದಾರೆ.

<><*<><>*><>

ಬೆಂಗಳೂರಿನ ನೀರಿನ ಕೊರತೆ ನಿರ್ವಹಣೆ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರು ಬೆಂಗಳೂರಿನಲ್ಲಿಂದು ಮಾಧ್ಯಮದೊಂದಿಗೆ ಮಾತನಾಡಿ, ಜಾಗತಿಕ ನಗರವಾದ ಬೆಂಗಳೂರು, ಕುಡಿಯುವ ನೀರಿನ ಬಿಕ್ಕಟ್ಟು ಎದುರಿಸುತ್ತಿರುವುದು ಚಿಂತೆಯ ವಿಷಯವಾಗಿದೆ. ನಗರದಲ್ಲಿ ಕಾಲರಾ ರೋಗ ಹರಡುವ ಭೀತಿಯಿದೆ. ಕುಡಿಯುವ ನೀರಿನ ಬಿಕ್ಕಟ್ಟು ಇರುವಾಗ, ಕಲುಷಿತ ನೀರು ಬಳಕೆಯಾಗುವ ಸಾಧ್ಯತೆಗಳು ಹೆಚ್ಚು ಎಂದರು. ರಾಜ್ಯದಲ್ಲಿ ನೀರು ಹಾಗೂ ನೀರಾವರಿ ಕಾಮಗಾರಿ ಸೇರಿದಂತೆ ಒಟ್ಟು ೨೦ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಕಾಮಗಾರಿಗಳನ್ನು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಥಗಿತಗೊಳಿಸಿದ್ದಾರೆ. ಪ್ರತಿ ಮನೆಗೆ ಕುಡಿಯುವ ನೀರು ಒದಗಿಸುವ 'ಜಲಜೀವನ್ ಮಿಷನ್' ಕಾಮಗಾರಿ ಕೂಡ ಸ್ಥಗಿತಗೊಂಡಿದೆ ಎಂದು ಸಚಿವೆ ನಿರ್ಮಲಾ ಸೀತರಾಮನ್ ಆಪಾದಿಸಿದರು.

<><*<><>*><>

ಬಿಜೆಪಿ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಸೇರಿದಂತೆ, ರಾಜ್ಯಸಭೆಗೆ ನೂತನವಾಗಿ ಆಯ್ಕೆಯಾದ ಐವರು ಸದಸ್ಯರು ಇಂದು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭೆಯ ಸಭಾಪತಿಗಳೂ ಆದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು, ಪಾರ್ಲಿಮೆಂಟ್ ಹೌಸ್‌ನಲ್ಲಿಂದು ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಬಿಜೆಪಿಯ ಅಶೋಕರಾವ್ ಶಂಕರ್‌ರಾವ್ ಚವ್ಹಾಣ್, ಚುನ್ನೀಲಾಲ್ ಗರಾಸಿಯಾ, ಎಐಟಿಸಿ

ಯ ಮೊಹಮ್ಮದ್ ನದೀಮುಲ್ ಹಕ್, ಕಾಂಗ್ರೆಸ್ ನ ಅನಿಲ್ ಕುಮಾರ್ ಯಾದವ್ ಪ್ರಮಾಣ ವಚನ ಸ್ವೀಕರಿಸಿದರು.

**<><*<><>*><>**

ದೇಶದ ಗಡಿ ಸಂಪೂರ್ಣ ಸುರಕ್ಷಿತವಾಗಿದೆ ಎಂದು ರಕ್ಷಣಾ ಸಚಿವ ಹಾಗೂ ಬಿಜೆಪಿ ಧುರೀಣ ರಾಜನಾಥ್ ಸಿಂಗ್ ಹೇಳಿದ್ದಾರೆ. ಅವರು, ಮಧ್ಯ ಪ್ರದೇಶದ ಸಿಂಗ್ರೌಲಿಯಲ್ಲಿಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ಈ ಹಿಂದೆ ಒಂದಾದಮೇಲೆ ಒಂದು ರಾಜ್ಯದಲ್ಲಿ ಭಯೋತ್ಪಾದಕ ಘಟನೆಗಳು ನಡೆಯುತ್ತಿತ್ತು. ಇತ್ತೀಚಿನ ಹತ್ತು ವರ್ಷಗಳಲ್ಲಿ ಇದನ್ನು ತಡೆಗಟ್ಟಲಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಜನರಲ್ಲಿ ದ್ವೇಷದ ಭಾವನೆ ಬಿತ್ತುತ್ತಿವೆ ಎಂದು ರಾಜನಾಥ್ ಸಿಂಗ್ ಆಪಾದಿಸಿದರು.

**<><*<><>*><>**

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ತಪ್ಪು ಆಪಾದನೆ ಹೊರಿಸಲಾಗಿದೆ ಎಂದು ಆಮ್‌ಆದ್ಮಿ ಪಕ್ಷ ಆರೋಪಿಸಿದೆ. ದೆಹಲಿಯಲ್ಲಿಂದು ಮಾಧ್ಯಮದೊಂದಿಗೆ ಮಾತನಾಡಿದ ದೆಹಲಿ ಸಚಿವೆ ಅತಿಶಿ, ತಮ್ಮ ಪಕ್ಷದ ನಾಯಕರನ್ನು ಕುಗ್ಗಿಸಲು ಸರ್ಕಾರಿ ಸಂಸ್ಥೆಗಳನ್ನು ಆಡಳಿತಾರೂಢ ಬಿಜೆಪಿ ಬಳಸಿಕೊಳ್ಳುತ್ತಿದೆ ಎಂದು ಆಪಾದಿಸಿದರು. ಈ ಮಧ್ಯೆ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಮಾತನಾಡಿ, ಆಮ್‌ಆದ್ಮಿ ಪಕ್ಷದ ಆರೋಪ ಸತ್ಯಕ್ಕೆ ದೂರವಾಗಿದೆ. ಆರ್ಥಿಕ ಸಂಪನ್ಮೂಲಗಳ ಅಗತ್ಯಕ್ಕಾಗಿಯೇ ಆಮ್‌ಆದ್ಮಿ ಪಕ್ಷ ಅಬಕಾರಿ ನೀತಿ ರೂಪಿಸಿತ್ತು ಎಂದು ಪ್ರತ್ಯಾರೋಪ ಮಾಡಿದ್ದಾರೆ.

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ತರಲಾದ ಮಾರ್ಪಾಡುಗಳನ್ನು ಸಾದರಪಡಿಸುವ ಹೊಸ ವೆಬ್‌ಸೈಟ್ ಅನ್ನು ದೆಹಲಿ ಬಿಜೆಪಿ ಯುವ ಮೋರ್ಚಾ ಅನಾವರಣಗೊಳಿಸಿದೆ. ಈ ವೆಬ್‌ಸೈಟ್, ದೇಶ ನಿರ್ಮಾಣದಲ್ಲಿ ಪ್ರಧಾನಿಯವರಿಗೆ ಇರುವ ಬದ್ಧತೆಯನ್ನು ತೋರಿಸುತ್ತದೆ ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ತಿಳಿಸಿದ್ದಾರೆ.

**<><*<><>*><>**

ಅಸುರಕ್ಷಿತ ಹಾಗೂ ಅಕ್ರಮ ಉದ್ಯೋಗದ ಆಮಿಷಕ್ಕೆ ಒಳಗಾಗಿದ್ದ ೧೭ ಭಾರತೀಯ ಕಾರ್ಮಿಕರು ಲಾವೋಸ್‌ನಿಂದ ಹಿಂದಿರುಗುತ್ತಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ. ಭಾರತೀಯ ಕಾರ್ಮಿಕರನ್ನು ಸುರಕ್ಷಿತವಾಗಿ ವಾಪಸ್ ಕರೆಸಿಕೊಳ್ಳಲು ನೀಡಿದ ಸಹಕಾರಕ್ಕಾಗಿ ಲಾವೋಸ್ ಆಡಳಿತಕ್ಕೆ ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮದ ಮೂಲಕ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

**<><*<><>*><>**

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಳೆದ ೨೪ ಗಂಟೆಗಳಲ್ಲಿ ಗರಿಷ್ಠ ತಾಪಮಾನ ೩೮.೩ ಡಿಗ್ರಿ ದಾಖಲಾಗಿರುವ ಹಿನ್ನೆಲೆಯಲ್ಲಿ ಅಲರ್ಟ್ ಘೋಷಣೆ ಮಾಡಲಾಗಿದೆ. ಭಾರತೀಯ ಹವಾಮಾನ ಇಲಾಖೆಯ ಏರೋಡ್ರೋಮ್ ಕಚೇರಿಯ ನಿರ್ದೇಶಕ ಚನ್ನಬಸನಗೌಡ ಎಸ್ ಪಾಟೀಲ್ ಈ ವಿಷಯ ತಿಳಿಸಿದ್ದಾರೆ.

**<><*<><>*><>**

ಅಸ್ತಾನದಲ್ಲಿ ನಡೆದ ಕಝಕಸ್ತಾನ್ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಲೆಂಜ್ ಟೂರ್ನಿಮೆಂಟ್‌ನಲ್ಲಿ ಭಾರತದ ಅನುಪಮಾ ಉಪಾಧ್ಯಾಯ ಮತ್ತು ಎಂ.ತರುಣ್ ಅನುಕ್ರಮವಾಗಿ ಮಹಿಳಾ ಮತ್ತು ಪುರುಷರ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಇಂದು ನಡೆದ ಮಹಿಳಾ ವಿಭಾಗದ ಅಂತಿಮ ಪಂದ್ಯದಲ್ಲಿ ಅನುಪಮಾ, ಭಾರತದವರೇ ಆದ ಇಶಾರಾಣಿ ಬರುಚಾ ಅವರನ್ನು ೨೧-೧೫, ೨೧-೧೬ ಅಂತರದಿಂದ ಸೋಲಿಸಿದರು. ಪುರುಷರ ವಿಭಾಗದಲ್ಲಿ ತರುಣ್ ಮಲೇಶಿಯಾದ ಸೂಂಗ್ ಝೂ ವೆನ್ ಅವರನ್ನು ೨೧-೧೦, ೨೧-೧೯ ರ ಅಂತರದಿಂದ ಪರಾಭವಗೊಳಿಸಿದರು.

**<><*<><>*><>**

ಜೈಪುರದಲ್ಲಿಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ತಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ರಾಜಸ್ತಾನ್ ರಾಯಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.